ದಿನಾಂಕ 17-03-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ**

1) ಆ ದಿನ ನಿ.ಪಿ.2 ರ ಪ್ರಕ್ರಿಯೆಯನ್ನು ಬೆಳಿಗ್ಗೆ 10-30 ಯಿಂದ 11-30 ವರದಿ ಮಾಡಿದ್ದರು. ನಿ.ಪಿ 2 ಕ್ಕೆ ಸಂಬಂಧಿಸಿದ ದಾಖಲೆಗಳಲ್ಲಿ ಸಹಿ ಮಾಡಿದ್ದೇನೆ. ಪ್ರಾಯೋಗಿಕ ಪಂಚನಾಮೆಗೆ ಬಳಸಿದ ಯಾವುದೇ ಧ್ರಾವಣಗಳನ್ನು ಮತ್ತು ಮಾದರಿಗಳನ್ನು ಠಾಣೆಯಲ್ಲಿ ಇಟ್ಟು ಹೋಗಿದ್ದೇವು. ನಿ.ಪಿ 2 ರ ಕೈಬರಹ ಯಾರದು ಎಂದರೆ ಅದನ್ನು ಟೈಪ್ ಮಾಡಿದಂತೆ ನೆನಪಿದೆ. ಅದನ್ನು ನಾನು ಹೋಗುವ ಮೊದಲೇ ಬೆರಳಚ್ಚು ಮಾಡಿ ಇಟ್ಟಿದ್ದರು ಎಂದರೆ ಸರಿಯಲ್ಲ. ನಿ.ಪಿ2 ನ್ನು ಯಾರ ಹೇಳಿಕೆಯ ಮೇಲೆ ಬರೆದಿದ್ದರು ಎಂದರೆ ಆಗ ಅಲ್ಲಿದ್ದ ಡಿವೈಎಸ್ಪಿ ಇವರ ಹೇಳಿಕೆಯಂತೆ ಟೈಪ್ ಮಾಡಿದ್ದರು ಯಾರು ಮಾಡಿದ್ದರು ನೆನಪಿಲ್ಲ. ನಿ.ಪಿ 2 ಕ್ಕೆ ನಾನು ಸಹಿ ಮಾಡಿದಾಗ ಸಮಯ ನನಗೆ ಈಗ ನೆನಪಿಲ್ಲ. ನಿ.ಪಿ 2 ನ್ನು ಬರೆದಾಗ ನಾನು, ಪೊಲೀಸರು ಮತ್ತು ಚಾ.ಸಾ.1 ಇವರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಪೊಲೀಸರು ಠಾಣೆಯಿಂದ ಹೊರಡುವ ಮೊದಲು ಏನು ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರೆಂದು ನಮಗೆ ಸ್ವತ್ತು ಪಟ್ಟಿ ತೋರಿಸಿಲ್ಲ. ಸೋಡಿಯಂ ಕಾರ್ಬೋನೇಟ್, ನೀರಿನ ಬಾಟಲಿಗಳು, ಕಾಟನ್ ಮತ್ತು ಪೆನ್ ಡ್ರೈವ್, ಕ್ಯಾಮೆರಾ ಇವುಗಳನ್ನು ತೆಗೆದುಕೊಂಡು ಹೋಗಿದ್ದರು. ಪೊಲೀಸರು ಈ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

2) ಚಾ.ಸಾ.1 ಈತನಿಗೆ, 1 ನೇ ಆರೋಪಿ ಹಣ ಕೇಳಿದಾಗ ಪಾವತಿಸಬೇಕೆಂದು ಪೊಲೀಸರು ಸೂಚಿಸಿದ್ದರು ಎಂದರೆ ನಿಜ. ನಾನು ಮತ್ತು ಚಾ.ಸಾ.1 1 ನೇ ಆರೋಪಿಯ ಬಳಿ ಹೋಗುವ ಮೊದಲು ಚಾ.ಸಾ.1 ಈತನ ಕಸಿನ್ ರಾಹುಲ 1 ನೇ ಆರೋಪಿಯ ಕೋಣೆಗೆ ಹೋಗಿ ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮತ್ತು ಚಾ.ಸಾ.1 ಮಾತ್ರವೇ ಮೊದಲು ಆರೋಪಿಯ ಕಚೇರಿಗೆ ಹೋಗಿದ್ದೇವು. ಫಿನಾಪ್ತಲಿನ್ ಲೇಪಿಸಿದ ನೋಟುಗಳು ಚಾ.ಸಾ.1 ಈತನ ಕಿಸೆಯಲ್ಲಿದ್ದವು. ಆ ದಿನ ಆ ಹಣವನ್ನು ಚಾ.ಸಾ.1 ಈತನ ಜೇಬಿಗೆ ನಾನೇ ಹಾಕಿದ್ದೆ.

3) ನಾವು 1 ನೇ ಆರೋಪಿಯ ಕೋಣೆಗೆ 2 ಗಂಟೆಗೆ ಹೋಗಿದ್ದೇವು ಎಂದರೆ ಸರಿ. ನಾನು ಮತ್ತು ಚಾ.ಸಾ.1, 1 ನೇ ಆರೋಪಿಯ ಕೋಣೆಗೆ ಒಟ್ಟು ಮೂರು ಬಾರಿ ಹೋಗಿದ್ದೇವು. 1 ನೇ ಆರೋಪಿ ಆ ದಿನ ಹಣ ಕೇಳಿದ್ದರು ಎಂಬುದು ಎಲ್ಲಿಯೂ ದಾಖಲಾಗಿಲ್ಲ ಎಂದರೆ ನಿಜ. ತಾರೀಕು 16-03-2019 ರಂದು 1 ನೇ ಆರೋಪಿ ನಮ್ಮ ಬಳಿ ಹಣ ಕೇಳಿಲ್ಲ ಎಂದರೆ ನಿಜ. 1 ನೇ ಆರೋಪಿಗೆ ಆ ದಿನ ಹಣ ಕೊಡಲು ಹೋದಾಗ ಹಣ ಬೇಡವೆಂದು ಹೇಳಿದ್ದರು ಎಂದರೆ ಇರಬಹುದು. ಆರೋಪಿಯ ಕೋಣೆಗೆ ಎಷ್ಟನೇ ಬಾರಿಗೆ ಹೋದಾಗ ಹಣ ಇಟ್ಟಿದ್ದರು ಎಂದರೆ, ಮೂರನೇ ಬಾರಿಗೆ ಹೋದಾಗ ಇರಬಹುದು. ಆ ದಿನ ನಾನು ಚಾ.ಸಾ.1 ಈತನ ಜೊತೆ ಹೋದಾಗ 2-3 ಜನರೊಂದಿಗೆ ಮಾತನಾಡಿದ್ದೇನೆ ಎಂದರೆ ಈಗ ನೆನಪಿಲ್ಲ.

4) 1 ನೇ ಬಾರಿಗೆ ಚಾ.ಸಾ.1 ಆರೋಪಿಯ ಕೋಣೆಗೆ ಹೋದಾಗ, ಚಾ.ಸಾ.1 ಹಣವನ್ನು ಟೇಬಲ್ ಮೇಲೆ ಇಟ್ಟು ಮರಳಿ ಪಡೆದಿದ್ದರು ಎಂದರೆ ಅದು ನೆನಪಿಲ್ಲ. ಮೊದಲ ಬಾರಿಗೆ 1 ನೇ ಆರೋಪಿಯ ಕೋಣೆಗೆ ಹೋದಾಗ ಅಲ್ಲಿ 2-3 ನಿಮಿಷ ಇದ್ದೇವು. ಎರಡನೇ ಬಾರಿಗೆ 1 ನೇ ಆರೋಪಿಯ ಕೋಣೆಗೆ ಹೋದಾಗ ಅಲ್ಲಿ 5-6 ನಿಮಿಷ ಇದ್ದೇವು. ನಾನು 2 ನೇ ಆರೋಪಿಯ ಜೊತೆ ಮಾತನಾಡಲಿಲ್ಲ. 1 ನೇ ಬಾರಿಗೆ ಹೋದಾಗ ಫಿರ್ಯಾದಿ ಮತ್ತು 1 ನೇ ಆರೋಪಿ ಏನು ಮಾತನಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಚಾ.ಸಾ.1 ಈತನೊಂದಿಗಿದ್ದ ವೈಸ್ ರೆಕಾರ್ಡರನ್ನು ಆರೋಪಿಯ ಕೋಣೆಗೆ ಬರುವಾಗ ಆನ್ ಮಾಡಿದ್ದು ಅದನ್ನು ಯಾವಾಗ ಆಫ್ ಮಾಡಿದ್ದರು ನನಗೆ ಗೊತ್ತಿಲ್ಲ. ಆ ದಿನ ವೈಸ್ ರೆಕಾರ್ಡರಲ್ಲಿದ್ದದ್ದನ್ನು ನನಗೆ ಕೇಳಿಸಿದ್ದರು. ವೈಸ್ ರೆಕಾರ್ಡರನಲ್ಲಿಯ ಎಲ್ಲಾ ಸಂಭಾಷಣೆಗಳನ್ನು ಲಿಪಿಕರಿಸಿದ್ದರು. ವೈಸ್ ರೆಕಾರ್ಡರನಲ್ಲಿದ್ದ ಎಲ್ಲಾ ಸಂಭಾಷಣೆಗಳನ್ನು ಆ ದಿನ ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ.

5) 1 ನೇ ಆರೋಪಿಯ ಬಳಿ ಚಾ.ಸಾ.1 ಮೊದಲ ಬಾರಿಗೆ ಹೋದಾಗ 2 ನೇ ಆರೋಪಿಯ ಬಳಿ ದಾಖಲೆ ಪಡಯಲು ಹೇಳಿದ್ದರು ಎಂದರೆ ನಿಜ. 3 ನೇ ಬಾರಿ ಚಾ.ಸಾ.1 ಒಂದನೆ ಆರೋಪಿಯ ಕೋಣೆಗೆ ಹೋಗುವ ಸಂದರ್ಭದಲ್ಲಿ ಅವರಿಗೆ ಬೇಕಾದ ಎಲ್ಲ ದಾಖಲೆಗಳನ್ನು ಪಡೆದಿದ್ದರು ಎಂದರೆ ನಿಜ. 3 ನೇ ಬಾರಿ ಹೊರಗೆ ಬಂದಾಗ ಚಾ.ಸಾ.1 ತಾವು ಹಣವನ್ನು ಟೇಬಲ್ ಮೇಲೆ ಇಟ್ಟು ಬಂದಿರುವುದಾಗಿ 1 ನೇ ಆರೋಪಿ ಆ ಹಣವನ್ನು ಏನು ಮಾಡಿದ್ದರೆಂದು ಗೊತ್ತಿಲ್ಲವೆಂದು ಹೇಳಿದ್ದರು

ಎಂದರೆ ನಿಜ. ಆರೋಪಿ ಹಣ ಬೇಡವೆಂದು ಹೇಳಿದ್ದಾರೆಂದು ಚಾ.ಸಾ.1 ತನಿಖಾಧಿಕಾರಿಯ ಮುಂದೆ ಹೇಳಿದ್ದರು ಎಂದರೆ ಸರಿಯಲ್ಲ. ಈ ವಿಷಯ ನನಗೆ ತಿಳಿದಿದ್ದರೂ ತನಿಖಾಧಿಕಾರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6) ಆ ದಿನ ನನ್ನ ಬಳಿ ಪೊಲೀಸರು ಸಮಜಾಯಿಷಿಯನ್ನು ಪಡೆದಿದ್ದರು. 1 ನೇ ಆರೋಪಿ ತನ್ನ ಸಮಜಾಯಿಷಿಯಲ್ಲಿ ನನಗೆ ಹಣ ಬೇಡವೆಂದು ಹೇಳಿದ್ದರು ಚಾ.ಸಾ.1 ಹಣ ಇಟ್ಟು ಹೋಗಿದ್ದರೆಂಬುದನ್ನು ಹೇಳಿದ್ದರು ಎಂದರೆ ನಿಜ ಮತ್ತು 2 ನೇ ಆರೋಪಿಯವರಿಗೆ ಆ ಹಣವನ್ನು ಮರಳಿಸಲು ಹೇಳಿದ್ದರು ಎಂದು ಸಮಜಾಯಿಷಿ ನೀಡಿದ್ದರು ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿಯ ಕಚೇರಿಯ ಹೊರಗೆ ಸುಮಾರು 10-15 ಜನ ಇದ್ದರು. ನಾನು ನಿ.ಪಿ 4 ರದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ 4 ರಲ್ಲಿ ಹೇಳಿದಂತಹ ಮುದ್ದೆಮಾಲುಗಳನ್ನು ಅಲ್ಲಿ ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಕೈಗಳನ್ನು ತೊಳೆದಾಗ ಧ್ರಾವಣದ ಬಣ್ಣ ಬದಲಾಗಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಎಸಿಬಿ ಕಚೇರಿಗೆ ಮರಳಿ ಹೋಗಿಲ್ಲ. ಆನಂತರ ಎಸಿಬಿ ಕಚೇರಿಗೆ ನಾಲ್ಕು ಬಾರಿ ಹೋಗಿದ್ದೆ. ನಾನು ನಾಲ್ಕು ಬಾರಿ ಹೋದಾಗಲು ಪೊಲೀಸರು ದಾಖಲೆಗಳಿಗೆ ಸಹಿ ಪಡೆದಿದ್ದರು. ಆಗ ಪೊಲೀಸರು ನನ್ನನ್ನು ವಿಚಾರಿಸಿದ್ದರು.

7) ಮೂರನೇ ಬಾರಿ ನಾನು ಎಸಿಬಿ ಕಚೇರಿಗೆ ಒಂದು ತಿಂಗಳ ನಂತರ 1 ನೇ ಆರೋಪಿಯ ಧ್ವನಿಯ ಮಾದರಿಗಳನ್ನು ಪಡೆಯಲು ಹೋಗಿದ್ದೆ. ಆಗ ನನ್ನ ಎದುರಿನಲ್ಲಿ ಪೊಲೀಸರಿಗೂ, ನನಗೂ ಮತ್ತು 1 ನೇ ಆರೋಪಿಗೂ ಮಾತುಕತೆಯಾಗಿತ್ತು. ಆರೋಪಿಯ ಧ್ವನಿಯ ಮಾದರಿಗಳನ್ನು ಪೊಲೀಸರು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮಾದರಿಯ ಧ್ವನಿಯನ್ನು ವೈಸ್ ರೆಕಾರ್ಡ್ ರನಲ್ಲಿ ಮಾಡಿದ್ದರು. ಸದ್ರಿ ಮಾದರಿಗಳನ್ನು ಕಲೆ ಹಾಕುವ ಮೊದಲು ಆ ವೈಸ್ ರೆಕಾರ್ಡ್ ನಲ್ಲಿ ಏನಿತ್ತೆಂದು ಪೊಲೀಸರು ನನಗೆ ತೋರಿಸಿಲ್ಲ. ನಿ.ಪಿ 5 ಮತ್ತು 6 ರ ಫೋಟೋಗಳನ್ನು ನಿ.ಪಿ 4 ರ ಸಮಯದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ಇವರಿಗೆ ಸಹಾಯ ಮಾಡಲು ನಿ.ಪಿ 2 ಮತ್ತು 4 ರ ಪಂಚನಾಮೆಗಳಿಗೆ ಪೂಕರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ ವಕೀಲರಿಂದ**

1 ನೇ ಆರೋಪಿಯ ಕೋಣೆಗೆ 2 ನೇ ಬಾರಿ ಹೋಗುವಾಗ 2 ನೇ ಆರೋಪಿಯ ಪರಿಚಯವಾಗಿತ್ತು. ಆಗ ಫಿರ್ಯಾದಿಗೆ ಸಂಬಂಧಪಟ್ಟ ಕಡತವನ್ನು ತರಲು 1 ನೇ ಆರೋಪಿ 2 ನೇ ಆರೋಪಿಗೆ ಸೂಚಿಸಿದ್ದರು. ಆಗ ಆ ಕಡತ ಟೇಬಲ್ ಮೇಲೆ ಇತ್ತು. ನಂತರ 2 ನೇ ಆರೋಪಿಯನ್ನು ತನಿಖಾಧಿಕಾರಿಯವರು ಕರೆಸಿದಾಗ ನೋಡಿದ್ದೆ. ಆಗ ಕೂಡಲೇ 2 ನೇ ಆರೋಪಿಯ ಕೈ ಹಿಡಿದಿದ್ದರು. ಆರೋಪಿಯ ಕೈಯನ್ನು ತೊಳೆಸುವ ಪ್ರಯತ್ನ ಮಾಡಲಿಲ್ಲ. 2 ನೇ ಆರೋಪಿ ಸ್ಕೂಟರ್ ನ್ನು ಎಲ್ಲಿ ನಿಲ್ಲಿಸಿದ್ದರೆಂದು ಗೊತ್ತಿಲ್ಲ. 1 ನೇ ಆರೋಪಿಯ ನಿ.ಪಿ 4 ರ ಸಮಯದಲ್ಲಿ ಎಸಿಬಿಯ ಇನ್ಸಪೆಕ್ಟರ್ ಸತೀಶ ಎಂಬುವರು ಇದ್ದರು. 2 ನೇ ಆರೋಪಿತನನ್ನು ಪೊಲೀಸರು ನೆಲಮಹಡಿಯ ಪಾರ್ಕಿಂಗ್ ಕರೆದುಕೊಂಡು ಹೋಗಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ರಿ ನೆಲ ಮಹಡಿಯ ಪಾರ್ಕಿಂಗ್ ನಿಂದ ಬರುವಾಗ ಸತೀಶ್ ಎಂಬ ಇನ್ಸಪೆಕ್ಟರ್ ನೀಲಿ ಬಣ್ಣದ ಬ್ಯಾಗ್‌ವೊಂದನ್ನು ಸದ್ರಿ ಸತೀಶ ಹಿಡಿದುಕೊಂಡು ಬಂದಿದ್ದರು ಎಂದರೆ ಗೊತ್ತಿಲ್ಲ.

2) ಪೊಲೀಸರು 2 ನೇ ಆರೋಪಿತನ್ನನು ಕರೆ ತಂದಾಗ ಕೈಗಳನ್ನು ಅಗಲಿಸಿ ಮೇಲೆ ಹಿಡಿದುಕೊಂಡು ಕರೆ ತಂದಿದ್ದರು. 2 ನೇ ಆರೋಪಿತನನ್ನು 1 ನೇ ಆರೋಪಿಯ ಕೋಣೆಯಿಂದ ಎಷ್ಟು ಬಾರಿ ಪೊಲೀಸರು ಹೊರಗೆ ಕರೆದುಕೊಂಡು ಹೋಗಿದ್ದರು ಎಂದರೆ ಒಂದು ಬಾರಿ ಮಾತ್ರ. ಟ್ರಾನ್ಸಪೋರ್ಟ್ ಆಫೀಸಿನ ವಿಭಾಗದಲ್ಲಿ ಎಷ್ಟು ಸಿಬ್ಬಂದಿಗಳು ಇದ್ದಾರೆ ಎಂಬುದು ಗೊತ್ತಿಲ್ಲ. ಸದ್ರಿ ವಿಭಾಗದ ಕಪಾಟುಗಳ ಜವಾಬ್ದಾರಿ ಯಾರಿಗೆ ಇತ್ತು ಎಂದು ಗೊತ್ತಿಲ್ಲ. ಆ ದಿನ ಟ್ರಾನ್ಸಪೋರ್ಟ್ ವಿಭಾಗದಲ್ಲಿ ಎಷ್ಟು ಕಪಾಟುಗಳಿತ್ತು ಎಂಬುದು ಈಗ ನನಗೆ ನೆನಪಿಲ್ಲ. 1 ನೇ ಆರೋಪಿಯ ಕಚೇರಿಯ ಮಹಡಿಯಲ್ಲಿಯೇ ಟ್ರಾನ್ಸಪೋರ್ಟ್ ವಿಭಾಗವು ಸಹ ಬರುತ್ತದೆ. ಆ ದಿನ ಕಚೇರಿಯ ಎಲ್ಲ ಸಿ.ಸಿ.ಟಿವಿಗಳ ದೃಶ್ಯಾವಳಿಗಳನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಚಾ.ಸಾ.1 ಇವರು 2 ನೇ ಆರೋಪಿತನೊಂದಿಗೆ ಮಾತನಾಡುವಾಗ ನಾನು ಇದ್ದೆ. ಅದು ಚಾ.ಸಾ.1 ಇವರ ಕಡತದ ಬಗ್ಗೆ ಕೇಳಿದಾಗ, 1 ನೇ ಆರೋಪಿಯ ಟೇಬಲ್ ಬಳಿ ಇರುವುದಾಗಿ ಹೇಳಿದ್ದ.

3) ವೈಸ್ ರೆಕಾರ್ಡ್ ನಲ್ಲಿದ್ದ ಸಂಭಾಷಣೆಯನ್ನು ಯಾವ ಸಮಯದಲ್ಲಿ ನನಗೆ ಕೇಳಿಸಿದ್ದರೆಂದು ಈಗ ನನಗೆ ನೆನಪಿಲ್ಲ. 2 ನೇ ಆರೋಪಿತನನ್ನು ಮೊದಲು ಹಿಡಿದಾಗ ಆತನ ಬಳಿ ಏನು ಇಲ್ಲವೆಂದು ಗಮನಿಸಿ, ನಂತರ ಹೊರಗೆ ಕರೆದುಕೊಂಡು ಹೋಗಿ ಕೈಗಳಿಗೆ ಪುಡಿಯನ್ನು ಲೇಪಿಸಿ ಕರೆತಂದಿದ್ದರು ಎಂದರೆ ಸರಿಯಲ್ಲ. ಆ ದಿನ 2 ನೇ ಆರೋಪಿತನನ್ನು ತನಿಖಾಧಿಕಾರಿ ಟ್ರಾನ್ಸ ಪೋರ್ಟ್‌ವಿಭಾಗಕ್ಕೆ ಕರೆದುಕೊಂಡು ಹೋದಾಗ ನಾನು ಅಲ್ಲಿ ಇದ್ದೆ. ಆನಂತರ ಆತನನ್ನು ಎಲ್ಲಿ ಕರೆದುಕೊಂಡು ಹೋಗಿದ್ದರೆಂದು ಗೊತ್ತಿಲ್ಲ. ನನಗೆ ತಿಳಿದಂತೆ ಎಲ್ಲಿಯೂ ಕರೆದುಕೊಂಡು ಹೋಗಿಲ್ಲ.

4) 2 ನೇ ಆರೋಪಿ ಸಮಜಾಯಿಷಿ ಕೊಡುವ ಸಂದರ್ಭದಲ್ಲಿ ನಾನು ಇದ್ದೆ. 2 ನೇ ಆರೋಪಿ ತನ್ನ ಸ್ಕೂಟರನಲ್ಲಿದ್ದ ಹಣ ಕೋಳಿ ಮಾರಿ ಬಂದ ಹಣ ಎಂದು, ಆ ಹಣಕ್ಕೂ ಕಚೇರಿಗೂ ಸಂಬಂಧವಿಲ್ಲ ಎಂದು ಹೇಳಿಕೆ ಕೊಟ್ಟಿದ್ದರು ಎಂದರೆ ನಿಜ. 1 ನೇ ಆರೋಪಿಯ ಧ್ವನಿಯ ಮಾದರಿ ಪಡೆದ 10 ದಿನಗಳ ನಂತರ 2 ನೇ ಆರೋಪಿಯನ್ನು ಎಸಿಬಿ ಕಚೇರಿಯಲ್ಲಿ ನೋಡಿದ್ದೆ. ಧ್ವನಿಗಳ ಮಾದರಿಗಳನ್ನು ಪಡೆದದ್ದು ಯಾರ ಕೋಣೆಯಲ್ಲಿ ಎಂದರೆ ಆಗ ಡಿವೈಎಸ್‌ಪಿ ಮತ್ತು ಇನ್ಸಪೆಕ್ಟರ್ ಇಬ್ಬರೂ ಇದ್ದರು. ಅದು ಯಾರ ಕೋಣೆ ಎಂದು ನನಗೆ ಗೊತ್ತಿಲ್ಲ. ಧ್ವನಿ ಮಾದರಿಗಳನ್ನು ಪಡೆದಾಗ ನಾನು ಚಾ.ಸಾ.5 ಮತ್ತು ಪೊಲೀಸಸಿಬ್ಬಂದಿಗಳು ಇದ್ದರು. ಆ ದಿನದ ಪ್ರಕ್ರಿಯೆಯು ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಆಗಿತ್ತು. ನನ್ನ ಸಮಕ್ಷಮ 2 ನೇ ಆರೋಪಿಯ ಯಾವುದೇ ಧ್ವನಿಯ ಮಾದರಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ನನ್ನ ಸಮಕ್ಷಮ ಯಾವುದೇ ಸಂಭಾಷಣೆಯನ್ನು ಕೇಳಿಸಿಲ್ಲ ಮತ್ತು ಧ್ವನಿಯ ಮಾದರಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

5) ನನಗೀಗ ತೋರಿಸಿದ ಎಮ್.ಒ 12 ರಲ್ಲಿಯ 3 ನೇ ಕ್ಯಾಮೆರಾದ ತಾರೀಕು 16-03-2019 ರ 3 ಗಂಟೆ 30 ನಿಮಿಷ 34 ಸೆಕೆಂಡುಗಳ ದೃಶ್ಯದಲ್ಲಿ 2 ನೇ ಆರೋಪಿತನನ್ನು ಕರೆ ತಂದು ಮೆಟ್ಟಿಲುಗಳ ಮೂಲಕ ಕೆಳಗೆ ಕರೆದುಕೊಂಡು ಹೋಗುತ್ತಿದ್ದರು. ಆಗ 47 ನೇ ಸೆಕೆಂಡಿನಲ್ಲಿ ನಾನು ಮತ್ತು ಚಾ.ಸಾ.5 ಸಹ ಅವರನ್ನು ಹಿಂಬಾಲಿಸಿದ್ದು ಕಂಡು ಬರುತ್ತದೆ. ಈ ಮಧ್ಯದ ಸಮಯದಲ್ಲಿ ಸತೀಶ ಎಂಬ ಎಸಿಬಿ ಇನ್ಸಪೆಕ್ಟರ್ ಸಹ ಇದ್ದರು ಎಂದರೆ ಗೊತ್ತಿಲ್ಲ. ಅದೇ ದೃಶ್ಯದ 3 ಗಂಟೆ 35 ನಿಮಿಷ 43 ಸಕೆಂಡುಗಳ ಸಮಯದಲ್ಲಿ ಸದ್ರಿ ಸತೀಶ ಇವರ ಕೈಯಲ್ಲಿ ನೀಲಿ ಚೀಲ ಕಂಡುಬರುತ್ತದೆ

ಎಂದರೆ ಅದು ಸರಿಯಾಗಿ ಕಾಣುತ್ತಿಲ್ಲ. ಅದು ಬ್ಯಾಗ್ ನಂತೆ ಕಾಣುತ್ತದೆ. 48 ನೇ ಸೆಕೆಂಡಿನಲ್ಲಿ 2 ನೇ ಆರೋಪಿತನನ್ನು ಕರೆ ತಂದದ್ದು ಇದೆ.

6) ನನಗೀಗ ತೋರಿಸಿದ ಎಮ್.ಒ 12 ರಲ್ಲಿಯ 8 ನೇ ಕ್ಯಾಮೆರಾದ ತಾರೀಕು 16-03-2019 ರ 2 ಗಂಟೆ 39 ನಿಮಿಷ 46 ಸಕೆಂಡುಗಳ ದೃಶ್ಯದಲ್ಲಿ 2 ನೇ ಆರೋಪಿಯ ಕೈ ತೊಳೆಸುವ ಪ್ರಕ್ರಿಯೆ ನಡೆಯುತ್ತಿದೆ ಎಂದರೆ ನಿಜ. ಸದ್ರಿ ದೃಶ್ಯಾವಳಿಯ 41 ನಿಮಿಷ 55 ಸೆಕೆಂಡುಗಳ ನಂತರ 42 ನಿಮಿಷ 7 ಸಕೆಂಡುಗಳ ಅವಧಿಯಲ್ಲಿ 2 ನೇ ಆರೋಪಿಯನ್ನು ಹೊರಗೆ ಕಡೆದುಕೊಂಡು ಹೋಗಿದ್ದರು. ಸದ್ರಿ ದೃಶ್ಯಾವಳಿಯ 43 ನಿಮಿಷ 22 ಸೆಕೆಂಡುಗಳ ಸಮಯದಲ್ಲಿ ಒಳಗೆ ಕರೆತಂದಿದ್ದರು. ಆ ಸಮಯದಲ್ಲಿಯೂ ಸಹ ನಾನು ಅವರೊಂದಿಗೆ ಹೊರಗೆ ಹೋಗಿದ್ದೆ. ನಂತರ 2 ನೇ ಆರೋಪಿಯ ಕೈಗಳನ್ನು ತೊಳೆದಿದ್ದರು.

7) ಆ ದಿನ ನಾನು 2 ನೇ ಆರೋಪಿಯೊಂದಿಗೆ ಟ್ರಾನ್ಪೋರ್ಟ್ ವಿಭಾಗಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಯಾವುದೇ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ಇನ್ಸಪೆಕ್ಟರ್ ಸತೀಶ ಎಂಬುವರು 2 ನೇ ಆರೋಪಿಯ ಸ್ಕೂಟರನಲ್ಲಿದ್ದ ಕೋಳಿ ಮಾರಿದ ಹಣವನ್ನು ತಂದು ಹಾಜರುಪಡಿಸಿ ಅದನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಈಗ ನಾನು ಪೊಲೀಸರು ಹಾಕಿದ ಒಂದು ಸುಳ್ಳು ದೂರಿಗೆ ಸಹಾಯವಾಗಲಿ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ